I/468995/2023

**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು – 03
Aranya Bhavan, 18th Cross,
Malleshwaram, Bengaluru – 03
Tele: 080 23343770
Email: pccfrecruitment@gmail.com

ಹಳೆಯ ಕಡತ ಸಂಖ್ಯೆ: ಅಪ್ರಮುಅಸಂ(ಸಿಮತ್ತುನೇ)/ಪುವಿ/ಸಿಆರ್-1/2014-15 **E-967732**
No. KFD/HOFF/B9(MSC)/32/2022-PnR-KFD Dated: 10-08-2023

# ಅಧಿಕೃತ ಜ್ಞಾಪನಾ

**ವಿಷಯ:** 2023-24 ಸಾಲಿನಲ್ಲಿ ಹೊಸದಾಗಿ ಸೃಜಿಸಿ ಭರ್ತಿ ಮಾಡಬೇಕಾಗಿರುವ ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ವೃತ್ತ/ವಿಭಾಗ/ಉಪ ವಿಭಾಗ/ವಲಯವಾರು ನಿಗದಿಪಡಿಸುವ (Earmarking) ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 217 ಅಪಸೇ 2014 ಬೆಂಗಳೂರು ದಿನಾಂಕ: 25.02.2015
2. ಸರ್ಕಾರದ ಆದೇಶ ಸಂಖ್ಯೆ: ಅಪಜೀ 217 ಅಪಸೇ 2014 ಬೆಂಗಳೂರು ದಿನಾಂಕ: 09.05.2019
3. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಅಪ್ರಮುಅಸಂ(ಸಿಮತ್ತುನೇ)/ ಪುವಿ/ಸಿಆರ್-1/2014-15 ದಿನಾಂಕ: 22.12.2020 *[ವೃತ್ತ/ವಿಭಾಗ/ಘಟಕವಾರು ಹುದ್ದೆಗಳನ್ನು ನಿಗದಿಪಡಿಸಿರುವುದು-I]*
4. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಅಪ್ರಮುಅಸಂ(ಸಿಮತ್ತುನೇ)/ ಪುವಿ/ಸಿಆರ್-1/2014-15 ದಿನಾಂಕ: 08.07.2021 *[ವೃತ್ತ/ವಿಭಾಗ/ಘಟಕವಾರು ಹುದ್ದೆಗಳನ್ನು ನಿಗದಿಪಡಿಸಿರುವುದು-II]*
5. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಅಪ್ರಮುಅಸಂ(ಸಿಮತ್ತುನೇ)/ ಪುವಿ/ಸಿಆರ್-1/2014-15 ದಿನಾಂಕ: 28.03.2022 *[ವೃತ್ತ/ವಿಭಾಗ/ಘಟಕವಾರು ಹುದ್ದೆಗಳನ್ನು ನಿಗದಿಪಡಿಸಿರುವುದು-III]*

## ಪ್ರಸ್ತಾವನೆ:

ಅರಣ್ಯ ಇಲಾಖೆಯಲ್ಲಿನ ವಿವಿಧ ವೃಂದಗಳ ಪುನರಾವಲೋಕನ ಹಾಗೂ ಇಲಾಖೆಯಲ್ಲಿನ ಮುಂಚೂಣಿ ಕಾರ್ಯ ನಿರ್ವಾಹಕ ಸಿಬ್ಬಂದಿಗಳ ವೃಂದಗಳನ್ನು ಬಲಪಡಿಸುವ ಕುರಿತು ಸರ್ಕಾರಕ್ಕೆ ವರದಿ ನೀಡಲು ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಶ್ರೀ ದೀಪಕ್ ಶರ್ಮಾ, ಭಾ.ಅ.ಸೇ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ಸಮಿತಿಯು ಸಮಗ್ರವಾದ ವರದಿಯನ್ನು ದಿನಾಂಕ: 09.06.2015ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಅದರ ಆಧಾರದ ಮೇಲೆ ಅರಣ್ಯ ಇಲಾಖೆಗೆ ಅಗತ್ಯವಿರುವ ಹುದ್ದೆಗಳ ಸೃಜನೆಯ ಕುರಿತಂತೆ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1098 ವೆಚ್ಚ-5/2017 ದಿನಾಂಕ: 08.12.2017ರಲ್ಲಿನ ಸಹಮತಿ ಮೇರೆಗೆ ಸರ್ಕಾರವು ಉಲ್ಲೇಖ(2)ರಲ್ಲಿ 2019-20ನೇ ಸಾಲಿನಿಂದ ಪ್ರಾರಂಭವಾಗುವಂತೆ 05 ವರ್ಷಗಳಲ್ಲಿ (2019-20ರಿಂದ 2023-24ರ ವರೆಗೆ) ವಿವಿಧ ಕಾರ್ಯನಿರ್ವಾಹಕ ವೃಂದಗಳಲ್ಲಿ ಒಟ್ಟು 3085 ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದಂತೆ, ವಲಯ ಅರಣ್ಯಾಧಿಕಾರಿ ವೃಂದದಲ್ಲಿ 2019-20ನೇ ಸಾಲಿನಿಂದ ಪ್ರಾರಂಭವಾಗುವಂತೆ 2023-24ನೇ ಸಾಲಿನ ವರೆಗೆ 5 ವರ್ಷಗಳಲ್ಲಿ ಒಟ್ಟು 67 ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಬೇಕಾಗಿದ್ದು, ಉಲ್ಲೇಖ(3)ರ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ 2019-20 ಹಾಗೂ 2020-21ನೇ ಸಾಲಿಗೆ 20 ಹುದ್ದೆಗಳು, ಉಲ್ಲೇಖ(4)ರ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ 2021-22 ಸಾಲಿಗೆ 17 ಹುದ್ದೆಗಳು ಹಾಗೂ ಉಲ್ಲೇಖ(5)ರ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ 2022-23ನೇ ಸಾಲಿಗೆ 20 ಹುದ್ದೆಗಳನ್ನು ಕೇಂದ್ರ ಕಛೇರಿ/ ವೃತ್ತ/ ವಿಭಾಗವಾರು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ.

ಪ್ರಸ್ತುತ 2023-24ನೇ ಸಾಲಿಗೆ ಸಂಬಂಧಿಸಿದ ವಲಯ ಅರಣ್ಯಾಧಿಕಾರಿ ವೃಂದದ ಒಟ್ಟು 10 ಹುದ್ದೆಗಳನ್ನು ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ವೃತ್ತ/ ವಿಭಾಗವಾರು ನಿಗದಿಪಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

I/468995/2023

# ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 217 ಅಪಸೇ 2014 ಬೆಂಗಳೂರು ದಿನಾಂಕ: 09.05.2019ರನ್ವಯ **2023-24ನೇ ಸಾಲಿಗೆ ವಲಯ ಅರಣ್ಯಾಧಿಕಾರಿ ವೃಂದಕ್ಕೆ ಸಂಬಂಧಿಸಿದ ಒಟ್ಟು 10 ಹುದ್ದೆಗಳನ್ನು ವೃತ್ತ/ ವಿಭಾಗವಾರು ಈ ಮೂಲಕ ಅನುಬಂಧದಲ್ಲಿ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ನಿಗದಿಪಡಿಸಲಾಗಿದೆ.**

1. ಹೀಗೆ ನಿಗದಿಪಡಿಸಲಾದ ವಲಯ ಅರಣ್ಯಾಧಿಕಾರಿ ವೃಂದದ ಹುದ್ದೆಗಳನ್ನು ಈಗಾಗಲೇ ಮಂಜೂರಾಗಿರುವ ವಲಯ ಅರಣ್ಯಾಧಿಕಾರಿ ಹುದ್ದೆಗಳ ವೃಂದಬಲದೊಂದಿಗೆ ಸೇರ್ಪಡೆ ಮಾಡಿಕೊಳ್ಳತಕ್ಕದ್ದು.
2. ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅಧಿಸೂಚನೆ ಸಂಖ್ಯೆ: FEE 72 FEG 2017 ದಿನಾಂಕ: 28.02.2022ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ)(ತಿದ್ದುಪಡಿ) ನಿಯಮಾವಳಿ 2018ರನ್ವಯ ಕ್ರಮ ಸಂಖ್ಯೆ: 9ರಲ್ಲಿ ಶೇಕಡ 50 ರಷ್ಟು ನೇರ ನೇಮಕಾತಿ ಹಾಗೂ ಶೇಕಡ 50ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕಾಯ್ದಿರಿಸುವುದು.
3. ಈ ಹಿಂದೆ, 2019-20 ರಿಂದ 2022-23ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಕಛೇರಿ/ ವೃತ್ತ/ ವಿಭಾಗವಾರು ಹಂಚಿಕೆ ಮಾಡಿರುವ ವಲಯ ಅರಣ್ಯಾಧಿಕಾರಿ ವೃಂದದ ಹುದ್ದೆಗಳನ್ನು ಸೇರಿದಂತೆ ಈಗ ನಿಗದಿಪಡಿಸಿದ ವಲಯ ಅರಣ್ಯಾಧಿಕಾರಿ ಹುದ್ದೆಗಳ ಪೈಕಿ **ನೇರ ನೇಮಕಾತಿ ಕೋಟಾದಡಿ ಕಾಯ್ದಿರಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ** ಮತ್ತು **ಮುಂಬಡ್ತಿ ಕೋಟಾದಡಿ ಕಾಯ್ದಿರಿಸಿದ ಹುದ್ದೆಗಳನ್ನು ಮುಂಬಡ್ತಿ ಮೂಲಕ ಮಾತ್ರ** ಭರ್ತಿ ಮಾಡಲು ಅವಕಾಶವಿರುತ್ತದೆ.

**Signed by Rajiv Ranjan, Ifs**
**Date: 14-08-2023 13:57:14**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿ ಮಾಹಿತಿ/ಅಗತ್ಯ ಕ್ರಮಕ್ಕಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ/ ಅಭಿವೃದ್ಧಿ/ ಅರಣ್ಯ ಸಂರಕ್ಷಣೆ/ EWPRT & CC), ಅರಣ್ಯ ಭವನ, ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ಮತ್ತು (ಮಾಹಿತಿ, ಸಂವಹನ ತಂತ್ರಜ್ಞಾನ) **- ಈ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.**
5. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
6. ಎಲ್ಲಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿಗಳು.
7. ಎಲ್ಲಾ ಕಾರ್ಯಯೋಜನೆ ಘಟಕಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
8. ಎಲ್ಲಾ ಸಂಶೋಧನೆ ಘಟಕಗಳ ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
9. ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ/ ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ/ ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು/ ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ/ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು.
10. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ/ ವನ್ಯಜೀವಿ ವಿಭಾಗಗಳು.
11. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ ಘಟಕಗಳು.
12. ಈ ಕಛೇರಿಯ ಬಿ1/ ಬಿ9/ ಹೆಚ್.ಆರ್.ಎಂ.ಎಸ್. ಶಾಖೆಗಳಿಗೆ.
13. ಹೆಚ್ಚುವರಿ ಪ್ರತಿ.

I/468995/2023

# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ: ಅಪಜೀ 217 ಅಪಸೇ 2014 ದಿನಾಂಕ: 09.05.2019ರಂತೆ 2023-24 ನೇ ಸಾಲಿನಲ್ಲಿ ನಿಗದಿಪಡಿಸಿದ 10 ವಲಯ ಅರಣ್ಯಾಧಿಕಾರಿ ಹುದ್ದೆಗಳ ವಿವರ

| Sl. No. | Circle/ Unit | Division | No. of Posts |
|---|---|---|---|
| **1** | **2** | **3** | **4** |
| **RFO (Legal and ICT) Posts in Division Office** | | | |
| 1 | Bellary Circle | Davanagere Division | 1 |
| 2 | Belagavi Circle | Vijayapura Division | 1 |
| 3 | Bengaluru Circle | Kolara Division | 1 |
| 4 | | Ramanagara Division | 1 |
| 5 | Chamarajanagara Circle | Malai Mahadeshwara Wildlife, Kollegala | 1 |
| 6 | Kanara Circle | Honnavara Division | 1 |
| 7 | | Karawara Division | 1 |
| 8 | | Yellapura Division | 1 |
| 9 | Mysore Circle | Mandya Division | 1 |
| **RFO (Intelligence) Posts in Circle Office** | | | |
| 10 | Mangalore Circle | | 1 |
| | | **Total** | **10** |